ಧಾರವಾಡ ಕ್ಷೇತ್ರದ ಅಭಿವೃದ್ಧಿಗೆ ಎಂ.ಎ.ಡಿ.ಬಿ. ಹಣಕಾಸಿನ ನೆರವು.

2031(2588)

ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ(ಧಾರವಾಡ): ಮಾನ್ಯ ಮಾನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಶಹರ ಕ್ಷೇತ್ರದ ಅಭಿವೃದ್ಧಿಗೆ ಎಂ.ಎ.ಡಿ.ಬಿ.ನಿಂದ ಮಂಜೂರಾದ ಕಾಮಗಾರಿಗಳು ಯಾವ ವರ್ಷದಲ್ಲಿ ಪೂರ್ಣಗೊಳ್ಳಲಿದೆ. (ವಿವರ ನೀಡುವುದು).

ಆ) ಮಂಜೂರಾದ ಕಾಮಗಾರಿಗಳು ಪೂರ್ಣಗೊಳ್ಳಲು ಅಭಿವೃದ್ಧಿ ಪ್ರಾಧಿಕಾರ ನಿಗದಿಪಡಿಸಿರುವ ಅವಧಿ ಎಷ್ಟು, ಎಷ್ಟು ವರ್ಷಗಳಿಂದ ಈ ಕಾಮಗಾರಿಗಳು ಪೂರ್ಣಗೊಂಡಿರುವುದಿಲ್ಲ.

ಇ) ಜಿಲ್ಲಾ ಪಂಚಾಯತ್‌ನ ತಾಂತ್ರಿಕ ಕಾರ್ಯಗಳು ನಿಗದಿತ ಒಂದು ವರ್ಷದಲ್ಲಿ ಮುಗಿಯದಿದ್ದರೆ ಹಾಗೂ ಕಳಪೆ ಕಾಮಗಾರಿ ಗಮನಿಸಿ ಸರ್ಕಾರ ಕ್ರಮ ಕೈಗೊಳ್ಳುವುದೇ, ವಿವರ ನೀಡುವುದು.

ಶ್ರೀ ಬಿ.ರಮಾನಾಥ ರೈ (ಮಾನುಗಾರಿಕೆ, ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು):

ಅ) ಅನುದಾನ ಲಭ್ಯತೆಯ ಆಧಾರದ ಮೇಲೆ ಕಾಮಗಾರಿಗಳನ್ನು ಬೇಗ ಪೂರ್ಣಗೊಳಿಸಲಾಗುವುದು. 34 ಕಾಮಗಾರಿಗಳು ಪೂರ್ಣಗೊಳಿಸಬೇಕಾಗಿದೆ.

ಆ) ಅನುದಾನದ ಲಭ್ಯತೆಯ ಆಧಾರದ ಮೇಲೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. ವರ್ಷವಾರು ಮುಂದುವರೆದ ಕಾಮಗಾರಿಗಳು ಈ ಕೆಳಗಿನಂತಿದೆ.

ವರ್ಷ	ಕಾಮಗಾರಿ ಸಂಖ್ಯೆ
1993-94	1
1995-96	1
1996-97	1
1997-98	4
1998-99	10

1999-2000	02
2000-2001	14
ನಬಾರ್ಡ್ ಕಾಮಗಾರಿ	1
	34

ಇ) ಕಳಪೆ ಕಾಮಗಾರಿಗಳ ಬಗ್ಗೆ ನಿರ್ದಿಷ್ಟವಾಗಿ ದೂರುಗಳು ಬಂದಲ್ಲಿ, ಅಂತಹ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಧಾರವಾಡ ನಗರದಲ್ಲಿ ಸ್ಮಶಾನಗಳ ಕೊರತೆ.

2032(2589)

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಧಾರವಾಡ ಮತಕ್ಷೇತ್ರದಲ್ಲಿ ಬರುವ ನಗರ ಮತ್ತು ಗ್ರಾಮಗಳು ಈಗಾಗಲೇ ರುದ್ರ ಭೂಮಿ ಹೊಂದಿವೆಯೇ? ಅವುಗಳ ಪೂರ್ವ ವಿವರ ಕ್ಷೇತ್ರವಾರು ನೀಡುವುದು.

2) ಧಾರವಾಡ ಮತ ಕ್ಷೇತ್ರದಲ್ಲಿ ಬಡಾವಣೆಗಳು ಹೆಚ್ಚಿದಂತೆ ನಗರ ಬೆಳೆದಿರುವುದರಿಂದ ಸಾರ್ವಜನಿಕರಿಗೆ ಸ್ಮಶಾನ ಭೂಮಿಯ ಕೊರತೆ ಇರುವುದನ್ನು ಸರ್ಕಾರ ಗಮನಿಸಿರುವುದೇ? ಹಾಗಿದ್ದರೆ ಯಾವ ಯಾವ ಸ್ಥಳಗಳಲ್ಲಿ ಬೇಕಾಗಿದೆ ಎಂಬುದನ್ನು ಗುರುತಿಸಿ ಕಾಯ್ದಿರಿಸಲಾಗುವುದೆ?

3) ಸ್ಮಶಾನ ಭೂಮಿಯನ್ನು ನಗರವನ್ನಾಗಿ ಸಾರ್ವಜನಿಕರು ಪರಿವರ್ತಿಸಿ ಕೊಳ್ಳುತ್ತಿರುವುದರಿಂದ ಸ್ಮಶಾನ ಭೂಮಿಯನ್ನು ಸರ್ಕಾರ ಮೀಸಲಿಡುವುದು ಅಗತ್ಯವಿಲ್ಲವೇ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

1) ಧಾರವಾಡ ಮತಕ್ಷೇತ್ರದಲ್ಲಿ ಬರುವ ಗ್ರಾಮಗಳಲ್ಲಿ ಹಾಲಿ ಇರುವ ರುದ್ರಭೂಮಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

2) ಹೊಸ ಬಡಾವಣೆಗಳಲ್ಲಿಯ ನಿವಾಸಿಗಳು ಸಧ್ಯಕ್ಕೆ ಬಡಾವಣೆಗಳಿಗೆ ಸಮೀಪವಾಗುವ